# ಮೌನ ಮಂಟಪ

ಡಿ.ಎನ್.ಗೀತಾ

## ಭರತ ಕೊಲೆಗಾರ; ಕೈಗೆ ಕೋಳ

‘ರಮ್ಯ, ಕಾಲೇಜು ಓಪನ್ ಆಗೋವರೆಗಾದ್ರೂ ನನ್ನ ಜೊತೆ ಇರೇ ಪ್ಲೀಸ್, ಯಾಕೋ ಕೋಟೆ ಬಂಗ್ಲೆಗೆ ಹೋಗೋಕೆ ಭಯವಾಗ್ತಿದೆ..’ ಅಂಗಲಾಚಿ ಋತು ಕೇಳಿದಾಗ ರಮ್ಯಾಳಿಗೆ ಅಯ್ಯೋ ಎನಿಸಿತು. ಅವಳ ಜೊತೆ ಇರಲು ಒಪ್ಪಿಕೊಂಡಳು. ಕೋಟೆಬಂಗಲೆಯ ಹತ್ತಿರ ಬರುವಾಗಲೇ ಅಲ್ಲಿ ಒಂದಷ್ಟು ಜನರು ಗುಂಪುಗೂಡಿದ್ದರು. ಒಂದಿಬ್ಬರು ಪೊಲೀಸರೂ ಬಂಗಲೆಯ ಕಾಂಪೌಂಡಿನ ಒಳಗೆ ಓಡಾಡಿಕೊಂಡಿದ್ದರು. ಆ ದೃಶ್ಯವನ್ನು ನೋಡಿ ಇಬ್ಬರ ಹೃದಯವೂ ಢವಗುಟ್ಟಿತು.

‘ಯಾಕೋ ನಂದಿಯಿಂದ ಹೊರಟ ಘಳಿಗೆಯೇ ಸರಿಯಿಲ್ಲ ಅನ್ನಿಸ್ತಿದೆ ರಮ್ಯ, ಇಲ್ಲೇನು ಕಾದಿದೆಯೋ....’ ಆತಂಕದಿಂದ ಮಾತನಾಡಿದಳು ಋತು. ಅವರು ಕಾಂಪೌಂಡಿನ ಒಳ ಬಂದಾಗ ಪುರುಷೋತ್ತಮರು ಹಾಗೂ ಕಲಾವತಿ ಪೊಲೀಸರಿಗೆ ಯಾವುದೋ ವಿಷಯದ ಬಗ್ಗೆ ಮಾಹಿತಿ

